ಇ) ಅಕ್ಕಿಯು ಹೇರಳವಾಗಿ ಅರಸೀಕೆರೆಗೆ ಬರುತ್ತಿದ್ದು ಮಾರುಕಟ್ಟೆಯಲ್ಲಿ ಮಾರಾಟವಾಗದೆ ಹೊರಗಡೆ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ ಪ್ರತಿ ತಿಂಗಳು ಮಾರ್ಕೆಟ್ಟು ಸುಂಕ ಎಷ್ಟು ನಷ್ಟವಾಗುತ್ತಿದೆ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರಿ ಮಂತ್ರಿಗಳು).—

ಅ) ೧) ತೆಂಗಿನಕಾಯಿ ೨) ಕೊಬ್ಬರಿ ೩) ಸೀಗು ೪) ಹುಚ್ಚೆಳ್ಳು ೫) ನೆಲಗಡಲೆಕಾಯಿ ೬) ಎಳ್ಳು ೭) ಹತ್ತಿ ೮) ಹರಳುಬೀಜ ೯) ಹುರುಳಿ.

ಆ) ಮಾರುಕಟ್ಟೆ ಆಡಳಿತ ಮಂಡಳಿಯು ಯಾವ ಸಾಮಾನುಗಳನ್ನು ಮಾರಾಟ ಮಾಡಲು ತೀರ್ಮಾನಿಸುವುದಿಲ್ಲ. ಆದರೆ ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ ೧೯೬೬ರ ಪ್ರಕಾರ ಅರಸೀಕೆರೆ ಮಾರುಕಟ್ಟೆ ಸಮಿತಿಯ ಕ್ಷೇತ್ರದಲ್ಲಿ ಈ ಕೆಳಗೆ ಕಾಣಿಸಿದ ವ್ಯವಸಾಯೋತ್ಪನ್ನಗಳ ಮಾರಾಟವನ್ನು ನಿಯಂತ್ರಣದ ಕಕ್ಷೆಗೆ ಸರ್ಕಾರದ ಪ್ರಕಟಣೆಯ ಮೇರೆಗೆ ಒಳಪಡಿಸಲಾಗಿದೆ.

| | |
|---|---|
| ೧) ತೆಂಗಿನಕಾಯಿ | ೧೩) ಮಾವಿನಹಣ್ಣು |
| ೨) ಕೊಬ್ಬರಿ | ೧೪) ನೆಲಗಡಲೆಕಾಯಿ |
| ೩) ಹತ್ತಿ | ೧೫) ಹುಚ್ಚೆಳ್ಳು |
| ೪) ಬೆಲ್ಲ | ೧೬) ಹರಳುಬೀಜ |
| ೫) ಮೆಣಸಿನಕಾಯಿ | ೧೭) ರಾಗಿ |
| ೬) ಎಳ್ಳು | ೧೮) ಜೋಳ |
| ೭) ಸೀಗು | ೧೯) ಆಲೂಗಡ್ಡೆ |
| ೮) ಧನಿಯಾ | ೨೦) ಬೆಳ್ಳುಳ್ಳಿ |
| ೯) ಭತ್ತ | ೨೧) ಜಾನುವಾರುಗಳು |
| ೧೦) ಅಕ್ಕಿ | ೨೨) ಕುರಿ |
| ೧೧) ಹುರುಳಿ | ೨೩) ಆಡು |
| ೧೨) ಬೇಳೆಕಾಳುಗಳು | ೨೪) ಕುಕ್ಕುಟವರ್ಗ |

ಇ) ಅಕ್ಕಿಯ ವ್ಯಾಪಾರವು ಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಿಸಲಾಗಿಲ್ಲ ಕಾರಣ ಅಕ್ಕಿಯು ಪ್ರಾಂಗಣದ ಹೊರಗೆ ಮಾರಾಟವಾಗುತ್ತದೆ ಮತ್ತು ಅಂಥ ಮಾರಾಟದ ಮೇಲೆ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡಲಾಗುತ್ತದೆ.

ಈ) ಅಕ್ಕಿ ಮಾರಾಟದ ಮೇಲೆ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡುತ್ತಿರುವ ಯಾವ ನಷ್ಟವೂ ಆಗುತ್ತಿಲ್ಲ.

## ಬೆಂಗಳೂರಿನಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ಮಂಜೂರು ಮಾಡುವುದು

೨೫೫ (೨೨೧) ಶ್ರೀ ಪಿ. ರಾಮದೇವ್ (ಪುಲ್ಲೇಶ್ವರ).—ಪೌರಾಡಳಿತ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೧–೮೨, ೧೯೮೨–೮೩ ಮತ್ತು ೧೯೮೩–೮೪ನೇ ವರ್ಷದ ಸಾಲಿನಲ್ಲಿ ಬೆಂಗಳೂರು ನಗರ ಕಾರ್ಪೊರೇಷನ್ ಮಂಜೂರು ಮಾಡಿದ ಬಹು ಅಂತಸ್ತಿನ ಕಟ್ಟಡಗಳೆಷ್ಟು ?

ಆ) ಈ ಕಟ್ಟಡಗಳಲ್ಲಿ ಅಂತಸ್ತುಗಳ ಸಂಖ್ಯೆಗಳನುಸಾರವಾಗಿ ಎಷ್ಟು ಮಂಜೂರು ಮಾಡಿದೆ?

ಇ) ಬಹು ಅಂತಸ್ತಿನ ಕಟ್ಟಡಗಳಲ್ಲಿ ಒಟ್ಟು ಎಷ್ಟು ಫ್ಲಾಟುಗಳಿಗೆ ಮಂಜೂರಾತಿ ನೀಡಲಾಗಿದೆ?

ಈ) ಈ ಬಹು ಅಂತಸ್ತಿನ ಕಟ್ಟಡಗಳ ಮಂಜೂರಾತಿ ಕಟ್ಟಡಗಳ ಬೈಲಾಗಳಿಗೆ ಅನುಸಾರವಾಗಿಲ್ಲ ದಿರುವುದನ್ನು ಸರ್ಕಾರದವರು ಗಮನಿಸುವರೆ?

ಉ) ಕಟ್ಟಡಗಳ ಬೈಲಾಗಳಿಗೆ ವಿರುದ್ಧವಾಗಿ ಮಂಜೂರಾತಿ ಉಲ್ಲಂಘಿಸಿರುವ ಅನಧಿಕೃತವಾಗಿ ಕಟ್ಟಿರುವ ಬಹು ಅಂತಸ್ತು ಕಟ್ಟಡಗಳ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಸಾಲುವಾರು ವಿವರ ಕೆಳಕಂಡಂತಿದೆ.

| | | | |
|---|---|---|---|
| ೧. | ೧೯೮೧–೮೨ | — | ೪೮ |
| ೨. | ೧೯೮೨–೮೩ | — | ೬೪ |
| ೩. | ೧೯೮೩–೮೪ | — | ೪೧ |
| | ಒಟ್ಟು (ಆಗಸ್ಟ್‌ವರೆಗೆ) | | ೧೫೩ |
| ಆ) | ೧) ನಾಲ್ಕು ಅಂತಸ್ತುಗಳ ಕಟ್ಟಡಗಳು | — | ೧೨೮ |
| | ೨) ಐದು ಅಂತಸ್ತುಗಳ ಕಟ್ಟಡಗಳು | — | ೨೩ |
| | ೩) ಏಳು ಅಂತಸ್ತುಗಳ ಕಟ್ಟಡಗಳು | — | ೧ |
| | ೪) ಎಂಟು ಅಂತಸ್ತುಗಳ ಕಟ್ಟಡಗಳು | — | ೧ |
| | | ಒಟ್ಟು | ೧೫೩ |

ಇ) ಮಂಜೂರಾದ ನೂರ ಐವತ್ತ ಮೂರು ಬಹು ಅಂತಸ್ತು ಕಟ್ಟಡಗಳ ಪೈಕಿ ೯೫ ವಾಸೋದ್ದೇಶಕ್ಕೆ ನೀಡಲಾಗಿದ್ದು ಅವುಗಳಲ್ಲಿ ಒಟ್ಟು ಫ್ಲಾಟುಗಳ ಸಂಖ್ಯೆ ೧೬೫೨.

ಈ) ೧೯೮೧–೮೨, ೧೯೮೨–೮೩ ಮತ್ತು ೧೯೮೩–೮೪ನೇ ಸಾಲಿನಲ್ಲಿ ಬೈಲಾಗಳ ವಿರುದ್ಧ ಮಂಜೂರಾತಿ ನೀಡಿದಂತ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಅನಧಿಕೃತವಾಗಿ ಕಟ್ಟಿರುವ, ಮಂಜೂರಾತಿ ಷರತ್ತುಗಳನ್ನು ಉಲ್ಲಂಘಿಸಿ ಕಟ್ಟಿರುವ ಹಾಗೂ ನಿಯಮಗಳ ವಿರುದ್ಧ ಮಂಜೂರಾತಿ ನೀಡಿರಬಹುದಾದಂಥ ಕಟ್ಟಡಗಳ ಬಗ್ಗೆ ವಿಚಾರಣೆ ನಡೆಸಲು ದಿನಾಂಕ ೧೭–೧೨–೮೨ರಂದು ವಿಚಾರಣಾಧಿಕಾರಿಗಳನ್ನು ನೇಮಿಸಿದೆ. ೧೦–೨–೧೯೮೫ ರಂದು ೩೫ ನಿರ್ದಿಷ್ಟ ಪ್ರಕರಣಗಳನ್ನು ತನಿಖೆಗಾಗಿ ಸಿ.ಓ.ಡಿ.ಗೆ ವಿನಂತಿಸಲಾಗಿದೆ.

## ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಸೂಪರ್‌ವೈಸರ್ ಹುದ್ದೆ ಖಾಲಿ ಇರುವ ಬಗ್ಗೆ

೫೫೧ (೫೫೮) ಕೆ.ಬಿ. ಸ್ವಾಮಿರಾವ್ (ಹೊಸನಗರ).—ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ:—

ಪ್ರಾಥಮಿಕ ಭೂ ಬ್ಯಾಂಕುಗಳಲ್ಲಿ ೩೫೦ ಸೂಪರ್‌ವೈಸರ್ ಹುದ್ದೆಗಳಿಗೆ ಕಳೆದ ಎರಡು ವರ್ಷಗಳ ಹಿಂದೆ ಅರ್ಜಿ ಕರೆದಿದ್ದು ಸಂದರ್ಶನ ಕೂಡ ನಡೆದಿದ್ದರೂ ಇನ್ನೂ ನೇಮಕಾತಿ ಆಗದಿರಲು ಕಾರಣಗಳೇನು ?